ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority
GST : 29AAALV0060D1ZS

ಸಂಖ್ಯೆ: ಬೆಂಅಪ್ರಾ/ನಯೋಸ/CLU-87/ 2955 /2022-23 ದಿನಾಂಕ

(PLO No.180653)

ಸಂಖ್ಯೆ:
No:

ದಿನಾಂಕ:
Date: 30/01/2023

# ಪ್ರಾರಂಭಿಕ ಪ್ರಮಾಣ ಪತ್ರ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರನ್ವಯ)

ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಉಲ್ಲೇಖ:-
1) ಅರ್ಜಿ ದಿನಾಂಕ 04.07.2022.
2) ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 3.1.73/2022, ದಿನಾಂಕ 19.10.2022.
3) ಈ ಕಛೇರಿ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/CLU-87/1818/2022-23, ದಿನಾಂಕ 09.11.2022.
4) ಸರ್ಕಾರದ ಆದೇಶ ಸಂಖ್ಯೆ: ನಅಇ 118 ಬೆಂಆಸೇ 2022, ಬೆಂಗಳೂರು ದಿನಾಂಕ 17.12.2022.
5) ಈ ಕಛೇರಿ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/CLU-87/2420/2022-23, ದಿನಾಂಕ 26.12.2022.
6) ಅರ್ಜಿದಾರರು ದಿನಾಂಕ 28.12.2022 ರಂದು ಕೆನರಾ ಬ್ಯಾಂಕ್ ನ ಚಲನ್ ಸಂಖ್ಯೆ GN22125310 ರ ಮೂಲಕ ರೂ.3,62,210/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 11.01.2023 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

*** ***

**ಪ್ರಸ್ತಾವನೆ:**

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಲು ಉಲ್ಲೇಖ (1) ರಲ್ಲಿ ಕೋರಿದ್ದ ಪ್ರಸ್ತಾವನೆಯನ್ನು ಉಲ್ಲೇಖ (2) ರಲ್ಲಿ ನಮೂದಿಸಿರುವ ದಿನಾಂಕ 19.10.2022 ರಂದು ನಡೆದ ಪ್ರಾಧಿಕಾರ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದಂತೆ, ಉಲ್ಲೇಖ (3) ರ ಈ ಕಛೇರಿ ಪತ್ರದಲ್ಲಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.

ಪ್ರಾಧಿಕಾರದಿಂದ ಸಲ್ಲಿಸಲಾಗಿದ್ದ ಭೂಉಪಯೋಗ ಬದಲಾವಣೆ ಪ್ರಸ್ತಾವನೆಗೆ ಉಲ್ಲೇಖ (4) ರ ಸರ್ಕಾರದ ಆದೇಶದಲ್ಲಿ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ

ಟಿ.ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು 560020
T. Chowdaiah Road, Kumarapark West, Bangalore 560020

Scanned with OKEN Scanner

ವಿಷಯ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

---

01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ 1961 ರ ಕಲಂ 14-A ರ ಅಡಿಯಲ್ಲಿನ ಅವಕಾಶದನ್ವಯ ಕೆಲವೊಂದು ಷರತ್ತುಗಳಿಗೆ ಒಳಪಟ್ಟು, ಭೂಉಪಯೋಗ ಬದಲಾವಣೆಗೆ ಸರ್ಕಾರದ ಅನುಮತಿ ನೀಡಲಾಗಿದೆ.

ಪ್ರಶ್ನಿತ ಜಮೀನಿನ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಉಲ್ಲೇಖ (5) ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಉತ್ತಮತೆ ಶುಲ್ಕ ಹಾಗೂ ಪರಿಶೀಲನಾ ಶುಲ್ಕ ಒಟ್ಟು ಮೊತ್ತ ರೂ.3,62,210/- ಗಳನ್ನು ಸಂದಾಯ ಮಾಡುವಂತೆ ಅರ್ಜಿದಾರರಿಗೆ ತಿಳಿಸಲಾಗಿತ್ತು. ಅದರಂತೆ ಅರ್ಜಿದಾರರು ಉಲ್ಲೇಖ (6) ರಂತೆ ದಿನಾಂಕ 28.12.2022 ರಂದು ರೂ.3,62,210/- ಗಳನ್ನು ಪ್ರಾಧಿಕಾರಕ್ಕೆ ಜಮಾ ಮಾಡಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸದಸ್ಯರ ವಿಭಾಗದವರು ದಿನಾಂಕ 11.01.2023 ರಂದು ಹಣ ಸಂದಾಯವಾಗಿರುವ ಬಗ್ಗೆ ದೃಢೀಕರಿಸಿ ವರದಿ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ಅಡಿಯಲ್ಲಿ ಒಟ್ಟು 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನನ್ನು "ವ್ಯವಸಾಯ" ವಲಯದಿಂದ "ವಸತಿ" ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಬಗ್ಗೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ಅಡಿಯಲ್ಲಿನ ಅವಕಾಶದನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

## ಷರತ್ತುಗಳು

1. ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (1) ರಡಿಯಲ್ಲಿ ವಲಯ ನಿಯಮಾವಳಿಗಳನ್ವಯ ವಿನ್ಯಾಸ/ ಅಭಿವೃದ್ಧಿ ನಕ್ಷೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮೋದನೆ ಪಡೆಯತಕ್ಕದ್ದು.

2. ಸರ್ಕಾರದ ಆದೇಶ ಸಂಖ್ಯೆ: ನಅಇ 118 ಬೆಂಆಸೇ 2022, ಬೆಂಗಳೂರು ದಿನಾಂಕ 17.12.2022 ರಲ್ಲಿನ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.



Scanned with OKEN Scanner

ವಿಷಯ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

---

3. ಪ್ರಶ್ನಿತ ಜಮೀನುಗಳಲ್ಲಿ ಕಂದಾಯ ದಾಖಲಾತಿಗಳ ರೀತ್ಯ ಇರುವ ಕಾಲುದಾರಿ, ಕಲ್ಲುಮರಟಿ, ಹಳ್ಳ 'ಬಿ' ಖರಾಬುಗಳನ್ನು ಕಾಯ್ದಿರಿಸತಕದ್ದು.

4. ಪ್ರಶ್ನಿತ ಜಮೀನುಗಳಿಗೆ ಲಗತ್ತಾಗಿರುವ ಹಾಲಿ ರಸ್ತೆಯನ್ನು 18.0ಮೀ ಅಗಲಕ್ಕೆ ವಿಸ್ತರಿಸತಕ್ಕದ್ದು.

5. ವಸತಿ ಅಭಿವೃದ್ಧಿಗಾಗಿ ಸಂಬಂಧಿಸಿದ ಇಲಾಖೆ / ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆಯತಕ್ಕದ್ದು.

6. ಮಳೆ ನೀರು ಕೊಯ್ಲು ಸಂಗ್ರಹಣೆ ಅಳವಡಿಸಿಕೊಳ್ಳತಕ್ಕದ್ದು.

7. ಯಾವುದೇ ಸಿವಿಲ್ ವ್ಯಾಜ್ಯಗಳಿದ್ದಲ್ಲಿ ನ್ಯಾಯಾಲಯದ ಆದೇಶಕ್ಕೆ ಬದ್ಧರಾಗಿರತಕ್ಕದ್ದು.

8. ಸುಳ್ಳು ಮಾಹಿತಿ ಅಥವಾ ಸಲ್ಲಿಸಿರುವ ಯಾವುದೇ ಮಾಹಿತಿ / ದಾಖಲೆಗಳು ತಪ್ಪಾಗಿದ್ದಲ್ಲಿ / ಪೋರ್ಜರಿ ಆಗಿದ್ದಲ್ಲಿ ಭೂಉಪಯೋಗ ಬದಲಾವಣೆಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

9. ಸದರಿ ಜಮೀನಿನಲ್ಲಿ RMP ರಸ್ತೆ / RR / SH/NH ಇತ್ಯಾದಿ ರಸ್ತೆ ಪಂಕ್ತೀಕರಣದಲ್ಲಿ ಬರುವ ಜಮೀನನ್ನು ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪುಕ್ಕಟೆಯಾಗಿ ಹಸ್ತಾಂತರಿಸಬೇಕು ಹಾಗೂ ವಿನ್ಯಾಸ ಅನುಮೋದನೆ ಸಂದರ್ಭದಲ್ಲಿ ರಸ್ತೆ ಮಾರ್ಜಿನನ್ನು ಕಡ್ಡಾಯವಾಗಿ ಬಿಡತಕ್ಕದ್ದು.

10. ಸದರಿ ಜಮೀನಿನಲ್ಲಿ ಹಾದು ಹೋಗುವ ಕೆರೆ / ನಾಲಾ / H.T Line / Substation Feeder / Rail Base Mass Transit Line / Rail-way Track ಪ್ರದೇಶಗಳಿಗೆ ನಿಯಮಾನುಸಾರ ಬಫರ್ ಜೋನ್ ನ್ನು ಕಾಯ್ದಿರಿಸತಕ್ಕದ್ದು.

11. ಅನುಮೋದನೆ ನೀಡುವ ಸಮಯದಲ್ಲಿ ಸ್ಥಳೀಯ ಯೋಜನಾ ಪ್ರಾಧಿಕಾರ / ಸ್ಥಳೀಯ ಸಂಸ್ಥೆಯಿಂದ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಅನುಮೋದನೆ ನೀಡತಕ್ಕದ್ದು.

12. ಸದರಿ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂಪರಿವರ್ತನೆ ಪಡೆದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅವಶ್ಯ ದಾಖಲೆಗಳನ್ನು ಸಲ್ಲಿಸಿ ವಿನ್ಯಾಸ ಅನಮೋದನೆ ಪಡೆಯತಕ್ಕದ್ದು.

13. ಪ್ರಶ್ನಿತ ಜಮೀನನ್ನು ಉದ್ದೇಶಿತ ಉಪಯೋಗಕ್ಕೆ ಬಳಸುವ ಮೊದಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರ ಪಡೆಯತಕ್ಕದ್ದು.

14. ಭೂಉಪಯೋಗ ಬದಲಾವಣೆಯು ಆಸ್ತಿಯ ಹಕ್ಕಿನ ಪ್ರತಿಪಾದನೆಗೆ ದಾಖಲೆಯಾಗುವುದಿಲ್ಲ ಮತ್ತು ಭೂಸುಧಾರಣಾ ಕಾಯ್ದೆಯಡಿ ಹಾಗೂ ಭೂಕಂದಾಯ ಕಾಯ್ದೆ 1964 ರ ಕಲಂ 136 (3) ರ ಅಡಿಯಲ್ಲಾಗಲೀ, ನ್ಯಾಯಾಲಯದಲ್ಲಾಗಲೀ ಪ್ರಕರಣಗಳು ಬಾಕಿ ಇದ್ದಲ್ಲಿ ಭೂಉಪಯೋಗ ಬದಲಾವಣೆಯು ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ. ಈ ಬಗ್ಗೆ ಅರ್ಜಿದಾರರು ನ್ಯಾಯಾಲಯದ ಅಂತಿಮ ಆದೇಶಕ್ಕೆ ಬದ್ಧರಾಗಿರತಕ್ಕದ್ದು ಮತ್ತು



Scanned with OKEN Scanner

ವಿಷಯ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

---

ಯಾವುದೇ ಸಂದರ್ಭದಲ್ಲಿ ಭೂಉಪಯೋಗ ಬದಲಾವಣೆ ಸಂಬಂಧ ಪಾವತಿಸಿರುವ ಶುಲ್ಕಗಳನ್ನು ವಾಪಸ್ ನೀಡಲಾಗುವುದಿಲ್ಲ.

15. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಮೇಲ್ಕಂಡ ಷರತ್ತುಗಳಿಗೊಳಪಟ್ಟು, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ.206 ರಲ್ಲಿನ 01ಎಕರೆ-34ಗುಂಟೆ (06ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರಡಿಯಲ್ಲಿ ಅನುಮೋದನೆ ನೀಡಲಾಗಿದೆ.

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಇವರಿಗೆ,

ಶ್ರೀ.ಎ.ರಾಮಪ್ಪ ಮತ್ತು ಎ.ಲಕ್ಷ್ಮಪ್ಪ,
ನಂ. 20, ಸನ್ನಿ ಬ್ಲಾಕ್ಸ್, ಸರ್ಜಾಪುರ ಮುಖ್ಯರಸ್ತೆ,
ವಿಪ್ರೋ ಕಾರ್ಪೋರೇಟ್ ಕಛೇರಿ ಹತ್ತಿರ, ದೊಡ್ಡಕನ್ನೇಹಳ್ಳಿ,
ಬೆಂಗಳೂರು-560 035.



Scanned with OKEN Scanner